ಅಧ್ಯಕ್ಷರು : ಮಾನ್ಯ ಶ್ರೀರಾಮರೆಡ್ಡಿಯವರು ಪ್ರಸ್ತಾವಿಕ ಮನ್ನಣೆಯನ್ನು ಮಾಡಿದ್ದಾರೆ. ನಾನು ಮಾನ್ಯ ಮಂತ್ರಿಗಳಿಗೆ ನನ್ನ ಜವಾಬ್ದಾರಿಯನ್ನು ಅರಿತು ವಿವರಣೆಯನ್ನು ಕೊಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದೇನೆ. ಅವರು ಅವಕಾಶವನ್ನು ಕೊಟ್ಟಿದ್ದಾರೆ. ಅವರು ಏನು ವಿವರಣೆಯನ್ನು ಕೊಡಬೇಕಾಗಿತ್ತು ಅದನ್ನು ಕೊಟ್ಟಿದ್ದಾರೆ. ಅಷ್ಟೇ ವಿವರಣೆ ಎಂದು ನಾನು ತಿಳಿದುಕೊಳ್ಳುತ್ತೇನೆ. I will close this matter here. ನನ್ನ ನಿಲುವನ್ನು ನಂತರ ನಿಧಾನವಾಗಿ ಪ್ರಕಟಿಸುತ್ತೇನೆ

ಶ್ರೀ ಸಿ.ಎಂ. ಲಿಂಗಪ್ಪ : ಸನ್ಮಾನ್ಯ ಸಭಾಧ್ಯಕ್ಷರೆ, ಪ್ರಸ್ತುತ ಅಧಿವೇಶನ ಪ್ರಾರಂಭವಾದ ದಿವಸ....

ಅಧ್ಯಕ್ಷರು : ದೈವ ಎಂದು ಒಂದಿದ್ದರೆ ನಿಮ್ಮನ್ನು ಯಾರನ್ನೂ ಕ್ಷಮಿಸುವುದಿಲ್ಲ. ನೀವು ಯಾರು ಆಡಳಿತ ಪಕ್ಷದಲ್ಲಿದ್ದೀರಿ, ನೀವು ಇಷ್ಟು ಜನ ಅನುಭವಿಗಳಿದ್ದು, ನೀವೆಲ್ಲರೂ ಮಂತ್ರಿಗಳಾಗಿ ನನ್ನನ್ನು ಅಧ್ಯಕ್ಷಸ್ಥಾನದಲ್ಲಿ ಕೂರಿಸಿ ಈ ರೀತಿಯ ಮುಜುಗರಕ್ಕೆ ನನ್ನನ್ನು ಸಿಕ್ಕಿಸಿ ನನಗೆ ನೀವು ಅಪಮಾನವನ್ನು ಮಾಡಿದ್ದೀರಿ, ಇದರಿಂದ ಭಗವಂತ ಎನ್ನುವವನು ಒಬ್ಬನು ಇದ್ದರೆ ನನಗೆ ಅವನ ಮೇಲೆ ನಂಬಿಕೆಯಿಲ್ಲ, ಡೆಫನೆಟ್ ಆಗಿ ನಿಮ್ಮನ್ನು ಯಾರೂ ಕ್ಷಮಿಸುವುದಿಲ್ಲ. None of you have come to my rescue. I am making this allegation on you. It is a charge on you.

ಶ್ರೀ ಎಂ.ಪಿ. ಪ್ರಕಾಶ್ : ನಾವು ಯಾರೂ ಕೂಡ ತಮ್ಮ ಘನತೆಯನ್ನು...

ಅಧ್ಯಕ್ಷರು : ಮಾನ್ಯ ಶಿವಪ್ಪನವರೆ, ಒಂದು ನಿಮಿಷ ಬನ್ನಿ. ನಾನು ಒಂದೆರಡು ನಿಮಿಷದಲ್ಲಿ ಬರುತ್ತೇನೆ. ಅಲರ್ಟ್ ಸದನವನ್ನು ನಡೆಸಿಕೊಂಡು ಹೋಗಿ, ಯಾರಿಗೆ ಬೇಕಾಗಿದೆ.

ಶ್ರೀ ಎಂ.ಪಿ. ಪ್ರಕಾಶ್ : ತಾವು ಎಲ್ಲರ ಬಗ್ಗೆ ಹಾಗೆ ಸಾರಸಗಟಾಗಿ ಆ ತರಹ ಯೋಚನೆ ಮಾಡಿದ್ದೀರಿ. We are pleading for you. Don't carry the impression that we are not coming to your rescue.

MR. SPEAKER : I am grateful to the co-operation, kindness and affection in all that you have shown to me ...

(ಈ ಸಂದರ್ಭದಲ್ಲಿ ಶ್ರೀ ಬಿ.ಬಿ. ಶಿವಪ್ಪನವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.)

(ಅ) ಮಾನ್ಯ ರಾಜ್ಯಪಾಲರು ಭಾಷಣ ಮಾಡುವಾಗ ಮಧ್ಯದಲ್ಲಿ ಅಡ್ಡಿ ಪಡಿಸಿದ ಸದಸ್ಯರ ಕುರಿತು.

ಶ್ರೀ ಸಿ.ಎಂ. ಲಿಂಗಪ್ಪ (ರಾಮನಗರ) : ಮಾನ್ಯ ಅಧ್ಯಕ್ಷರೆ, ಪ್ರಸ್ತುತ ಅಧಿವೇಶನ ಪ್ರಾರಂಭವಾದ ದಿವಸ ರಾಜ್ಯಪಾಲರ ಭಾಷಣ ಆಗಿಬೇಕಾಗಿದ್ದಂತಹ ಸಂದರ್ಭದಲ್ಲಿ ಆದಂತಹ ಒಂದು ಘಟನೆಯಿಂದ ನಾನು ಮಾನ್ಯ ಅಧ್ಯಕ್ಷರಿಗೆ ನನ್ನ ಹಕ್ಕುಚ್ಯುತಿ ಆಯಿತು ಎಂದು ಹೇಳಿ ಒಂದು ನೋಟೀಸನ್ನು ಕೊಟ್ಟಿದ್ದೆ.

ಛೇರ್ಮನ್ : ದಯಮಾಡಿ ಮಾನ್ಯ ಸದಸ್ಯರುಗಳು ಸದನವನ್ನು ಸ್ವಲ್ಪ ಒಂದು ರೂಪಕ್ಕೆ ತರುವುದು ಒಳ್ಳೆಯದು. ಮಾನ್ಯ ಲಿಂಗಪ್ಪನವರು ಇನ್ನೊಂದು ಪ್ರಿವಿಲೇಜ್ ಮೋಷನ್ ಮೂವ್ ಮಾಡುತ್ತಿದ್ದಾರೆ. ದಯಮಾಡಿ ಸದಸ್ಯರುಗಳು ತಮ್ಮ ತಮ್ಮ ಸ್ಥಾನಗಳಲ್ಲಿ ಕುಳಿತುಕೊಂಡು ಆಲಿಸುವುದು ಒಳ್ಳೆಯದು.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಸ್ವಾಮಿ ಒಂದು ನಿಮಿಷ ಮಾತನಾಡುತ್ತೇನೆ. ದಯಮಾಡಿ ಈ ಸದನವನ್ನು ಐದು ನಿಮಿಷ ಮುಂದೂಡಬೇಕು. ಒಳ್ಳೆಯ ವಾತಾವರಣ ಇಲ್ಲ.

ದಯವಿಟ್ಟು 5-10 ನಿಮಿಷ ಸದನವನ್ನು ಮುಂದೂಡಿ ಯಾರಾದರೂ ನಾಯಕರು ಸ್ಪೀಕರ್ ಅವರ ಹತ್ತಿರ ಹೋಗಿ ಮಾತನಾಡಬೇಕು. ಈ ತರಹ ಸಭೆ ಅಂತಿಮವಾಗುವುದಾದರೆ ಯಾರಿಗಾದರೂ ಗೌರವ ಬರುತ್ತದೆಯೆ? ದಯವಿಟ್ಟು ಸದನವನ್ನು 5-10 ನಿಮಿಷ ಮುಂದೂಡಿ. ದಯಮಾಡಿ ಆ ಕೆಲಸವನ್ನು ಈಗ ಮಾಡಬೇಕು.

ಶ್ರೀ ವಾಟಾಳ್‌ನಾಗರಾಜ್ : ದಯಮಾಡಿ ಸಭೆಯನ್ನು 10 ನಿಮಿಷ ಮುಂದೂಡಿ.

ಛೇರ್ಮನ್ : ಅಧ್ಯಕ್ಷರು ಅವರು ಹೋಗುವುದಕ್ಕೆ ಮೊದಲು ಮಾನ್ಯ ಸದಸ್ಯರಾದ ಲಿಂಗಪ್ಪನವರಿಗೆ ಮಾತನಾಡಿಯೆಂದು ಅವಕಾಶ ಕೊಟ್ಟು ಹೋಗಿದ್ದಾರೆ. ಅದಕ್ಕೆ ವಾತಾವರಣವನ್ನು ತಿಳಿ ಮಾಡಿಯೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಅಧ್ಯಕ್ಷರು ಪೀಠ ಬಿಟ್ಟು ಹೋಗುವುದಕ್ಕೆ ಮೊದಲು ಅವರಿಗೆ ಮಾತನಾಡಿಯೆಂದು ಆದೇಶ ಇತ್ತಿದ್ದಾರೆ. ಅದನ್ನು ಮುಂದುವರಿಸಬೇಕೇ ಅಥವಾ ನಿಲ್ಲಿಸಬೇಕೇ ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ತಾವು ಹಿರಿಯರೆಲ್ಲಾ ಹೋಗಿ 5 ನಿಮಿಷ ಸ್ಪೀಕರ್ ಅವರ ಹತ್ತಿರ ಮಾತನಾಡಿ ವಾತಾವರಣ ಸರಿಪಡಿಸುವುದು ಒಳ್ಳೆಯದು. ಈ ವಾತಾವರಣ ಒಳ್ಳೆಯದಲ್ಲ. ಇದು ಸರಿಯಲ್ಲ. ತಾವು ಐದು ನಿಮಿಷ ಸಭೆಯನ್ನು ಮುಂದೂಡಿ. ಅವರ ಜೊತೆ ಮಾತನಾಡಿ ಆಮೇಲೆ ಸಭೆ ಸೇರೋಣ. ಯಾರಾದರೂ ಅವರ ಛೇಂಬರ್‌ಗೆ ಹೋಗಿ ಮಾತನಾಡಿ. ಈ ವಾತಾವರಣ ಒಳ್ಳೆಯದಲ್ಲ. ಇದು ಕೊನೆಯ ದಿವಸ. ನೋಡಿ ತಾವೆಲ್ಲಾ ಹಿರಿಯ ಮಂತ್ರಿಗಳು ಇದ್ದೀರಿ, ಇದೆಲ್ಲಾ ಸರಿಯಲ್ಲ. ಸಭೆಯನ್ನು ಮುಂದೂಡಿ ವಿಚಾರ ಮಾಡಿ. ಮಾಡುವುದಿಲ್ಲವೆಂದರೆ ನಿಮ್ಮ ಹಠಮಾರಿತನ ಮಾಡಿಕೊಂಡು ಹೋಗಿ. ಇದು ಯಾರಿಗೂ ಗೌರವ ತರತಕ್ಕದ್ದು ಅಲ್ಲ. ಈ ಮನೆಗೆ ಅವಮಾನವಾಗುತ್ತದೆ. ಇದು ಸರಿಯಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ: ತಾವು ದಯಮಾಡಿ ಸದನವನ್ನು ಮುಂದೂಡಬೇಕು. ತಾವು ಅಧ್ಯಕ್ಷ ಪೀಠದಲ್ಲಿ ಕುಳಿತಿದ್ದೀರಿ. ಈ ರೀತಿಯಲ್ಲಿ ಶಾಸನಸಭೆ ಮುಕ್ತಾಯವಾಗಬಾರದು.

ಛೇರ್ಮನ್ : ತಾವು ದಯಮಾಡಿ ಒಂದು ನಿಮಿಷ ಕುಳಿತುಕೊಳ್ಳಿ ನಾನು ಹೇಳುತ್ತೇನೆ. ಅಧ್ಯಕ್ಷರು ಮಾನ್ಯ ಸದಸ್ಯರಿಗೆ ತಾವು ಮಾತನಾಡಿಯೆಂದು ಆದೇಶ ಕೊಟ್ಟು ಆಗಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಆ ಸೀಟಿಗೆ ಬಂದ ತಕ್ಷಣ ತಾವು ಅಧ್ಯಕ್ಷರಾದಿರಿ. Nothing prevents you from giving a ruling. You are empowered to adjourn this House. Kindly adjourn the House.

ಶ್ರೀ ಸಿ.ಆರ್. ಸಗೀರ್ ಅಹ್ಮದ್ : ಹೌಸ್ ಆರ್ಡರ್‌ನಲ್ಲಿ ಇಲ್ಲ.

ಛೇರ್ಮನ್ : ಹೌಸ್ ಆರ್ಡರ್‌ನಲ್ಲಿ ಇಲ್ಲವೆಂದು ಹೇಳಬೇಡಿ. ಹೌಸ್ ಆರ್ಡರ್‌ನಲ್ಲಿದೆ. ಆದರೆ ನೀವು ಎಲ್ಲರೂ ಪ್ರಾರಂಭ ಮಾಡಿದ್ದೀರಿ. ದಯವಿಟ್ಟು ಕುಳಿತುಕೊಳ್ಳಿ. ನಾನು ಹೇಳುತ್ತೇನೆ. ಈಗ ಸದನವನ್ನು 15 ನಿಮಿಷಗಳ ಕಾಲ ಮುಂದೂಡುತ್ತಿದ್ದೇನೆ.

(ಸದನವು 12 ಗಂಟೆ 44 ನಿಮಿಷಗಳಿಗೆ ಮುಂದೂಟಲ್ಪಟ್ಟು ಮತ್ತೆ 15 ನಿಮಿಷಗಳ ನಂತರ ಸಮಾವೇಶಗೊಳ್ಳಲು ನಿರ್ಧರಿಸಿತು)